# ಹೊಸತು

## ತ್ವಚೆ ರಕ್ಷಣೆಗೆ ಕಾಯ ಉತ್ಪನ್ನ

ತ್ವಚೆಯಲ್ಲಿನ ಜಿಡ್ಡು, ಎಣ್ಣೆ ಅಂಶಗಳಿಂದ ಚರ್ಮ ಹಾನಿಯಾಗುವುದನ್ನು ತಪ್ಪಿಸಲು ಕಾಯ ಆ್ಯಂಟಿಆಕ್ಸ್, ವಿಟ್–ಸಿ ಫಾರ್ಮುಲ ಎಂಬ ಹೊಸ ಉತ್ಪನ್ನವೊಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಕಲುಷಿತ ವಾತಾವರಣದಿಂದ ಚರ್ಮ ಹಾನಿಯಾಗುತ್ತದೆ. ಇದನ್ನು ತಡೆಯಲು ಈ ಜೆಲ್‌ನಲ್ಲಿ ವಿಟಮಿನ್ ಸಿ ಅಂಶಗಳು ಸಮೃದ್ಧವಾಗುವಂತೆ ನೋಡಿಕೊಳ್ಳಲಾಗಿದೆ. ಇದು ಮೊಡವೆ ಕಲೆ, ಕಪ್ಪು ಕಲೆಗಳನ್ನು ನಿವಾರಿಸುತ್ತದೆ. ಆ್ಯಂಟಿ ಏಜಿಂಗ್ ಆಗಿಯೂ ಕೆಲಸ ಮಾಡುತ್ತದೆ ಎನ್ನುವುದು ಕಂಪೆನಿ ವಿವರಣೆ. 30 ಎಂಎಲ್‌ಗೆ 1,790 ರೂಪಾಯಿ.
ವಿವರಕ್ಕೆ: 8452066955







## ಹೊಸ ನೈಕ್ ಶೂ

ಶೂಗಳಿಗೆ ಹೆಸರಾದ ನೈಕ್ ಕಂಪೆನಿ ಇದೀಗ ಫುಟ್ಬಾಲ್ ಆಟಗಾರರಿಗಾಗಿಯೇ ಹೊಸ ಮಾದರಿಯ ಶೂಗಳ ಸಂಗ್ರಹವನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಟಿಯಿಂಪೊ 94 ಹೆಸರಿನಲ್ಲಿರುವ ಈ ಶೂಗಳು ಧರಿಸಲು ಆರಾಮದಾಯಕವಾಗಿದೆ ಎನ್ನುತ್ತದೆ ಕಂಪೆನಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ.

## ಡಿಸ್ನಿಯಿಂದ ಉಡುಗೊರೆ ಮೊಬೈಲ್

ಮಕ್ಕಳ ಆಟಿಕೆ ಮತ್ತು ಉಡುಗೊರೆ ವಸ್ತುಗಳಿಗೆ ಹೆಸರಾದ ಡಿಸ್ನಿ ಮಕ್ಕಳಿಗೆ ಉಡುಗೊರೆಯಾಗಿ ನೀಡಲು ಹೊಸ ಆಟಿಕೆ ಮೊಬೈಲ್ ಒಂದನ್ನು ಮಾರುಕಟ್ಟೆಗೆ ತಂದಿದೆ. ಜತೆಗೆ ಮಿಕ್ಕಿ ಮೌಸ್ ಸಾಫ್ಟ್ ಟಾಯ್ಸ್, ಟೀಶರ್ಟ್, ಡ್ರೆಸ್‌ಗಳು ಸಹ ಈ ಸಂಗ್ರಹದಲ್ಲಿದೆ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ.
ವಿವರಕ್ಕೆ: 9619691940






## ಫ್ಯಾಷನ್ ಆಸ್ಸೆಸರೀಸ್

ಆ್ಯರೊ ನ್ಯೂಯಾರ್ಕ್ ಬೇಸಿಗೆ ಕಾಲಕ್ಕಾಗಿ ಉಡುಪು ಮತ್ತು ಇತರ ಫ್ಯಾಷನೆಬಲ್ ಆಸ್ಸೆಸರೀಸ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಬಟ್ಟೆಯ ಸಂಗ್ರಹದಲ್ಲಿ ಲೀಫ್ ಪ್ರಿಂಟ್, ಬಬ್ಬಲ್ಸ್, ಬೈಟ್ ಪ್ಯಾಟರ್ನ್ ಮುಂತಾದ ನೂತನ ವೈವಿಧ್ಯಗಳಿವೆ. ಉಡುಪುಗಳಿಗೆ ಸರಿಹೊಂದುವ ತಂಪು ಕನ್ನಡಕ, ಬೆಲ್ಟ್, ಚಪ್ಪಲಿ, ವಾಚು ಮುಂತಾದ ಉತ್ಪನ್ನಗಳೂ ಈ ಸರಣಿಯಲ್ಲಿ ಲಭ್ಯ.
ಬೆಲೆ ಲಭ್ಯತೆ ಮತ್ತಿತರ ವಿವರಗಳಿಗೆ: 9886333942
www.arrowlife.com

## ಟ್ಯಾಂಗ್ ಪಾನೀಯ

ಕ್ಯಾಡ್‌ಬರಿ ಇಂಡಿಯಾ, ಟ್ಯಾಂಗ್ ಹೆಸರಿನ ಹೊಸ ಜ್ಯೂಸ್ ಪ್ಯಾಕೆಟ್ ಒಂದನ್ನು ಮಾರುಕಟ್ಟೆಗೆ ತಂದಿದೆ. ಒಂದು ಲೀಟರ್ ಟ್ಯಾಂಗ್‌ನ ಮೂರು ಪ್ಯಾಕ್ ಖರೀದಿಸಿದರೆ ಒಂದು ಟ್ಯಾಂಗ್ ಬಾಟಲಿಯನ್ನು ಉಚಿತವಾಗಿ ಪಡೆಯಬಹುದು. ಮಾವಿನಹಣ್ಣು, ನಿಂಬೆ ಮತ್ತು ಕಿತ್ತಳೆ ಸ್ವಾದಗಳಲ್ಲಿ ಸಿಗುತ್ತದೆ.
ವಿವರಕ್ಕೆ: 99720 66555

